



# <u>ವಿದ್ಯಾರ್ಥಿಗಳಿಗೆ ಇ-ದೃಢೀಕರಣಕ್ಕಾಗಿ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಮತ್ತು ಸಲ್ಲಿಸಲು ಬಳಕೆದಾರರ ಕೈಪಿಡಿ</u>

# ಪರಿವಿಡಿ


1. ವಿದ್ಯಾರ್ಥಿ ಲಾಗಿನ್ ..... 3
2. ವಿದ್ಯಾರ್ಥಿ ವಿವರಗಳ ದೃಢೀಕರಣ ಪುಟ ..... 4
   2.1 ವಿದ್ಯಾರ್ಥಿಯ ವಿವರಗಳ ನವೀಕರಣ ಪುಟ ..... 6
3. ದಾಖಲೆಗಳನ್ನು ಅಪ್‌ಲೋಡ್ ಮಾಡುವ ಪುಟ ..... 8
   3.1 ಪಿಯುಸಿ ಅಂಕಪಟ್ಟಿಯನ್ನು ಅಪ್‌ಲೋಡ್ ಮಾಡುವ ವಿಧಾನ ..... 12
4. ದೃಢೀಕರಿಸಲು ಬಾಕಿ ಉಳಿದಿರುವ ದಾಖಲೆಗಳು ..... 17
5. ಅನುಮೋದಿತ ದಾಖಲೆಗಳು ..... 19
6. ತಿರಸ್ಕರಿಸಿದ ದಾಖಲೆಗಳು ..... 20
7. ಪ್ರೊಫೈಲ್ ಸೈನ್ ಔಟ್ ..... 21





ಇಂಟರ್ನೆಟ್ ಬ್ರೌಸರ್‌ನಿಂದ ಇ-ದೃಢೀಕರಣ ಅಪ್ಲಿಕೇಶನ್‌ಅನ್ನು ಪ್ರವೇಶಿಸಲು, ನಿಮ್ಮ ಇಂಟರ್ನೆಟ್ ಬ್ರೌಸರ್ ತೆರೆಯಿರಿ ಮತ್ತು ವಿಳಾಸ ಪಟ್ಟಿಯಲ್ಲಿ [http://ssp.postmatric.karnataka.gov.in] ಎಂದು ಟೈಪ್ ಮಾಡಿ ಮತ್ತು ಎಂಟರ್ ಒತ್ತಿರಿ. ಮೇಲಿನ ಸ್ಕ್ರೀನ್‌ಶಾಟ್‌ನಲ್ಲಿ ತೋರಿಸಿರುವಂತೆ ವೆಬ್ ಪುಟ ತೆರೆಯುತ್ತದೆ.





ಇ-ದೃಢೀಕರಣ ಪೋರ್ಟಲ್ ಅನ್ನು ಪ್ರವೇಶಿಸಲು "ಇ-ದೃಢೀಕರಣ ಪೋರ್ಟಲ್ ಗಾಗಿ ಇಲ್ಲಿ ಕ್ಲಿಕ್ ಮಾಡಿ (ವಿದ್ಯಾರ್ಥಿಗಳು)" ಲಿಂಕ್ ಅನ್ನು ಕ್ಲಿಕ್ ಮಾಡಿ

## 1. ವಿದ್ಯಾರ್ಥಿ ಲಾಗಿನ್




ನಿಮ್ಮ ಎಸ್‌ಎಸ್‌ಪಿ ಐಡಿ, ಆಧಾರ್/ಎಸ್‌ಎಸ್‌ಪಿಯಲ್ಲಿರುವಂತೆ ಹೆಸರು, ಲಿಂಗ, ಕ್ಯಾಪ್ಚಾವನ್ನು ನಮೂದಿಸಿ ಮತ್ತು "**Verify**" ಬಟನ್ ಕ್ಲಿಕ್ ಮಾಡಿ. ನಿಮ್ಮನ್ನು ವಿದ್ಯಾರ್ಥಿ ವಿವರಗಳ ದೃಢೀಕರಣ ಪುಟಕ್ಕೆ ಮರುನಿರ್ದೇಶಿಸಲಾಗುತ್ತದೆ

## 2. ವಿದ್ಯಾರ್ಥಿ ವಿವರಗಳ ದೃಢೀಕರಣ ಪುಟ




- ವಿದ್ಯಾರ್ಥಿ ಐಡಿ, ವಿದ್ಯಾರ್ಥಿ ಹೆಸರು, ನಿಮ್ಮ ಕಾಲೇಜಿನ ಜಿಲ್ಲೆ,ತಾಲ್ಲೂಕು, ವಿಶ್ವವಿದ್ಯಾಲಯದ ಹೆಸರು, ಕಾಲೇಜಿನ ಹೆಸರು, ಕೋರ್ಸ್ ನ ಹೆಸರು, ಶಿಸ್ತಿನ ಹೆಸರು, ಕೋರ್ಸ್ ವರ್ಷ, ಪ್ರವೇಶ ವರ್ಷ, ನೋಂದಣಿ ಸಂಖ್ಯೆ ಮುಂತಾದ ನಿಮ್ಮ ವಿವರಗಳನ್ನು ಎಸ್ಎಸ್ಪಿ ಅರ್ಜಿ ಸಲ್ಲಿಕೆ ಪೋರ್ಟಲ್‌ನಿಂದ ಸ್ವಯಂ-ಪಡೆಯಲಾಗುತ್ತದೆ

- ಎಲ್ಲಾ ವಿವರಗಳು ಸರಿಯಾಗಿ ಕಂಡುಬಂದರೆ ನಂತರ "**Confirm & Proceed**" ಬಟನ್ ಅನ್ನು ಕ್ಲಿಕ್ ಮಾಡಿ. "**Update Student Details**" ಪುಟಕ್ಕೆ ನಿಮ್ಮನ್ನು ಮರುನಿರ್ದೇಶಿಸಲಾಗುತ್ತದೆ
- ಯಾವುದೇ ವಿವರಗಳು ತಪ್ಪಾಗಿ ಕಂಡುಬಂದರೆ ನೀವು ಎಸ್ಎಸ್ಪಿ ಪೋರ್ಟಲ್‌ಗೆ ಲಾಗಿನ್ ಆಗಿ ತಪ್ಪಾದ ವಿವರಗಳನ್ನು ನವೀಕರಿಸಬಹುದು

## 2.1 ವಿದ್ಯಾರ್ಥಿಯ ವಿವರಗಳ ನವೀಕರಣ ಪುಟ


Update Student Details

| | |
|---|---|
| Student Name : | Suchitra V |
| Have you pursued previous qualifying course from any of the Universities outside Karnataka : | No |
| Have you passed SSLC before 2004 ? : | No |
| Have you passed 10th standard from other State Board Examination: | Yes |
| Select State of SSLC : | Andhra Pradesh |
| Have you passed PUC before 2010: | Yes |

- ನೀವು ಕರ್ನಾಟಕದ ಹೊರಗಿನ ಯಾವುದೇ ವಿಶ್ವವಿದ್ಯಾನಿಲಯದಿಂದ ಹಿಂದಿನ ಕೋರ್ಸ್ ಅನ್ನು ಅಧ್ಯಯನ ಮಾಡಿದ್ದರೆ "ಹೌದು" ಆಯ್ಕೆಯನ್ನು ಆರಿಸಿ ಮತ್ತು ರಾಜ್ಯ, ವಿಶ್ವವಿದ್ಯಾನಿಲಯ, ಕಾಲೇಜು ಮತ್ತು ಕೋರ್ಸ್ ಅನ್ನು ಆಯ್ಕೆಮಾಡಿ ಇಲ್ಲದಿದ್ದರೆ "ಇಲ್ಲ" ಆಯ್ಕೆಯನ್ನು ಆಯ್ಕೆಮಾಡಿ
- ನಿಮ್ಮ ಹಿಂದಿನ ವರ್ಷದ ಕೋರ್ಸ್ ಅನುಸರಿಸಿದ ಪರೀಕ್ಷಾ ವ್ಯವಸ್ಥೆಯನ್ನು ಆಯ್ಕೆಮಾಡಿ
- ನೀವು 2004ರ ಮೊದಲು ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿದ್ದರೆ, "ಹೌದು" ಇಲ್ಲದಿದ್ದರೆ "ಇಲ್ಲ" ಆಯ್ಕೆಯನ್ನುಆಯ್ಕೆಮಾಡಿ
- ನೀವು ಇತರ ರಾಜ್ಯ ಮಂಡಳಿಯಲ್ಲಿ 10ನೇ ತರಗತಿಯನ್ನು ಉತ್ತೀರ್ಣರಾಗಿದ್ದರೆ, "ಹೌದು" ಆಯ್ಕೆಯನ್ನು ಆಯ್ಕೆಮಾಡಿ ಮತ್ತು ನೀವು 10ನೇ ತರಗತಿಯಲ್ಲಿ ಉತ್ತೀರ್ಣರಾಗಿರುವ ರಾಜ್ಯದ ಹೆಸರನ್ನು ಆಯ್ಕೆಮಾಡಿ ಇಲ್ಲದಿದ್ದರೆ "ಇಲ್ಲ" ಆಯ್ಕೆಯನ್ನು ಆಯ್ಕೆಮಾಡಿ
- ನೀವು 2010ರ ಮೊದಲು ಪಿ.ಯು.ಸಿ ಉತ್ತೀರ್ಣರಾಗಿದ್ದರೆ, "ಹೌದು" ಇಲ್ಲದಿದ್ದರೆ "ಇಲ್ಲ" ಆಯ್ಕೆಯನ್ನುಆಯ್ಕೆಮಾಡಿ




- ನೀವು ಇತರ ರಾಜ್ಯ ಮಂಡಳಿಯಲ್ಲಿ 12ನೇ ತರಗತಿಯನ್ನು ಉತ್ತೀರ್ಣರಾಗಿದ್ದರೆ, "ಹೌದು" ಆಯ್ಕೆಯನ್ನು ಆಯ್ಕೆಮಾಡಿ ಮತ್ತು ನೀವು 12ನೇ ತರಗತಿಯಲ್ಲಿ ಉತ್ತೀರ್ಣರಾಗಿರುವ ರಾಜ್ಯದ ಹೆಸರನ್ನು ಆಯ್ಕೆಮಾಡಿ ಇಲ್ಲದಿದ್ದರೆ "ಇಲ್ಲ" ಆಯ್ಕೆಯನ್ನು ಆಯ್ಕೆಮಾಡಿ
- ನೀವು IGCSE ಬೋರ್ಡ್‌ನಲ್ಲಿ 10ನೇ ತರಗತಿಯನ್ನು ಉತ್ತೀರ್ಣರಾಗಿದ್ದರೆ, "ಹೌದು" ಆರಿಸಿ ಇಲ್ಲದಿದ್ದರೆ "ಇಲ್ಲ" ಆಯ್ಕೆಯನ್ನು ಆಯ್ಕೆಮಾಡಿ
- ನೀವು IGCSE ಬೋರ್ಡ್‌ನಲ್ಲಿ 12 ನೇ ತರಗತಿಯನ್ನು ಉತ್ತೀರ್ಣರಾಗಿದ್ದರೆ, "ಹೌದು" ಆರಿಸಿ ಇಲ್ಲದಿದ್ದರೆ "ಇಲ್ಲ" ಆಯ್ಕೆಯನ್ನು ಆಯ್ಕೆಮಾಡಿ
- ನೀವು ಡಿಪ್ಲೊಮಾ ಪಾಲಿಟೆಕ್ನಿಕ್ / ಬಿ.ಇ / ಬಿ.ಟೆಕ್/ ಬಿ.ಆರ್ಕ್ ನಲ್ಲಿ ಓದುತ್ತಿದ್ದು ನಿಮ್ಮ ಪೋಷಕರು ಸೇನೆ / ವಾಯುಪಡೆ / ನೌಕಾಪಡೆ ವಿಭಾಗಗಳ ನಾನ್-ಕಮಿಷನ್ಡ್ / ಕೆಳಗಿನ ಶ್ರೇಣಿಯ ರಕ್ಷಣಾ ಸೇವೆಯಲ್ಲಿದ್ದರೆ "ನೀವು ರಕ್ಷಣಾ ಸಿಬ್ಬಂದಿಯ ಸಂಬಂಧಿಯೇ" ಕ್ಷೇತ್ರದ ವಿರುದ್ಧ "ಹೌದು" ಇಲ್ಲದಿದ್ದರೆ "ಇಲ್ಲ" ಆಯ್ಕೆಯನ್ನು ಆಯ್ಕೆಮಾಡಿ
- "ಉಳಿಸು" ಬಟನ್ ಮೇಲೆ ಕ್ಲಿಕ್ ಮಾಡಿ

## 3. ದಾಖಲೆಗಳನ್ನು ಅಪ್‌ಲೋಡ್ ಮಾಡುವ ಪುಟ

ಇ-ದೃಢೀಕರಣ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕಾದ ದಾಖಲೆಗಳ ಪಟ್ಟಿಯ ಮಾಹಿತಿಯನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ

**ಕರ್ನಾಟಕದಲ್ಲಿರುವ ವಿಶ್ವವಿದ್ಯಾಲಯಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಇ-ದೃಢೀಕರಣ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕಾದ ದಾಖಲೆಗಳ ಪಟ್ಟಿ**

| ಅಪ್‌ಲೋಡ್ ಮಾಡಬೇಕಾದ ದಾಖಲೆಗಳು | ಅನ್ವಯವಾಗುವ ಕೋರ್ಸ್‌ಗಳು | ಇ-ದೃಢೀಕರಣ ಅಧಿಕಾರಿ | ಅನ್ವಯವಾಗುವ ಇಲಾಖೆಗಳು |
|---|---|---|---|
| ರಕ್ಷಣಾ ಸೇವೆಯ ಪ್ರಮಾಣಪತ್ರ | ಬಿ.ಇ / ಬಿ.ಟೆಕ್ / ಬಿ.ಆರ್ಕ್ / ಬಿ.ಎ / ಬಿ.ಎಸ್ಸಿ / ಬಿ.ಕಾಮ್ / ಬಿ.ಬಿ.ಎ / ಎಂ.ಬಿ.ಬಿ.ಎಸ್ / ಬಿ.ಡಿ.ಎಸ್ / ಎಂ.ಡಿ.ಎಸ್ / ಎಂ.ಡಿ / ಎಂ.ಎಸ್/ ಡಿ.ಎಂ / ಎಂ.ಸಿ.ಹೆಚ್ / ಪಿಜಿ ಡಿಪ್ಲೊಮಾ (ವೈದ್ಯಕೀಯ) ಕೋರ್ಸುಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಯ ಪೋಷಕರು ಸೇನೆ/ ವಾಯುಪಡೆ/ನೌಕಾಪಡೆ ವಿಭಾಗಗಳ ನಾನ್-ಕಮಿಷನ್ಡ್/ಕೆಳಗಿನ ಶ್ರೇಣಿಯ ರಕ್ಷಣಾ ಸೇವೆಯಲ್ಲಿದ್ದರೆ ಮಾತ್ರ ಅನ್ವಯ | ಕಾಲೇಜಿನ ನಿಯೋಜಿತ ಇ-ದೃಢೀಕರಣ ಅಧಿಕಾರಿ | ತಾಂತ್ರಿಕ ಶಿಕ್ಷಣ ಇಲಾಖೆ / ಕಾಲೇಜು ಶಿಕ್ಷಣ ಇಲಾಖೆ |
| ಪೋಷಕರ ವೇತನ ಪ್ರಮಾಣಪತ್ರ | ಬಿ.ಎ / ಬಿ.ಎಸ್ಸಿ / ಬಿ.ಕಾಮ್ / ಬಿ.ಬಿ.ಎ / ಬಿ.ಎಸ್.ಡಬ್ಲ್ಯೂ / ಬಿ.ಎ.ಎಲ್.ಎಲ್.ಬಿ / ಡಿಪ್ಲೊಮಾ ಪಾಲಿಟೆಕ್ನಿಕ್ / ಬಿ.ಇ / ಬಿ.ಟೆಕ್ / ಬಿ.ಆರ್ಕ್ / ಎಂ.ಇ / ಎಂ.ಟೆಕ್ / ಎಂ.ಆರ್ಕ್ / ಎಂ.ಬಿ.ಬಿ.ಎಸ್ / ಬಿ.ಡಿ.ಎಸ್ / ಎಂ.ಡಿ.ಎಸ್ / ಎಂ.ಡಿ / ಎಂ.ಎಸ್ / ಡಿ.ಎಂ / ಎಂ.ಸಿ.ಹೆಚ್ / ಪಿಜಿ ಡಿಪ್ಲೊಮಾ(ವೈದ್ಯಕೀಯ), ಎಂ.ಬಿ.ಎ / ಎಂ.ಸಿ.ಎ ಕೋರ್ಸುಗಳಲ್ಲಿ ಅಧ್ಯಯನ ಮಾಡುತ್ತಿರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಯ ಪೋಷಕರು ವೇತನ ಪಡೆಯುವ ಉದ್ಯೋಗಿಗಳಾಗಿದ್ದು, ಕುಟುಂಬ ವಾರ್ಷಿಕ ಆದಾಯವು 2.5 ಲಕ್ಷದಿಂದ 10 ಲಕ್ಷಗಳ ಒಳಗಡೆ ಇರಬೇಕು | | ತಾಂತ್ರಿಕ ಶಿಕ್ಷಣ ಇಲಾಖೆ / ವೈದ್ಯಕೀಯ ಶಿಕ್ಷಣ ಇಲಾಖೆ / ಆಯುಷ್ ಇಲಾಖೆ / ಕಾಲೇಜು ಶಿಕ್ಷಣ ಇಲಾಖೆ / ಸಮಾಜ ಕಲ್ಯಾಣ ಇಲಾಖೆ/ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ |


| | | | |
|---|---|---|---|
| ಸ್ಟೈಫಂಡ್ ಮತ್ತು ನಾನ್-ಪ್ರಾಕ್ಟೀಸಿಂಗ್ ಪ್ರಮಾಣಪತ್ರ | ಡಿ.ಎಂ / ಎಂ.ಡಿ / ಎಂ.ಡಿ ಹೋಮಿಯೋಪತಿ / ಎಂ.ಡಿ.ಎಸ್ / ಎಂ.ಎಸ್ / ಎಂ.ಎಸ್. (ಮಾಸ್ಟರ್ ಆಫ್ ಸರ್ಜರಿ) / ಎಂ.ಡಿ (ನ್ಯಾಚುರೋಪತಿ ಮತ್ತು ಯೋಗಿಕ್ ಸೈನ್ಸಸ್)/ ಪಿಜಿ ಯುನಾನಿ / ಪಿಜಿ ಡಿಪ್ಲೋಮಾ(ವೈದ್ಯಕೀಯ) ಕೋರ್ಸುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು | | ಸಮಾಜ ಕಲ್ಯಾಣ ಇಲಾಖೆ/ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ / ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ / ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ / ವೈದ್ಯಕೀಯ ಶಿಕ್ಷಣ ಇಲಾಖೆ / ಆಯುಷ್ ಇಲಾಖೆ / ಕಾಲೇಜು ಶಿಕ್ಷಣ ಇಲಾಖೆ / ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ / ಅಂಗವಿಕಲರ ಕಲ್ಯಾಣ ಇಲಾಖೆ |
| ಎಸ್.ಎಸ್.ಎಲ್.ಸಿ/ 10ನೇ ತರಗತಿಯ ಅಂಕಪಟ್ಟಿ | • 2004 ರ ಮೊದಲು ಎಸ್.ಎಸ್.ಎಲ್.ಸಿ ಉತ್ತೀರ್ಣರಾದ ವಿದ್ಯಾರ್ಥಿಗಳು<br>• ಇತರೆ ರಾಜ್ಯದ ಬೋರ್ಡ್‌ನ 10ನೇ ತರಗತಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು<br>• IGCSE ಬೋರ್ಡ್‌ನ 10ನೇ ತರಗತಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು | | |
| ಪಿ.ಯು.ಸಿ/12ನೇ ತರಗತಿಯ ಅಂಕಪಟ್ಟಿ | • 2010ರ ಮೊದಲು ಪಿ.ಯು.ಸಿ ಉತ್ತೀರ್ಣರಾದ ವಿದ್ಯಾರ್ಥಿಗಳು<br>• ಇತರೆ ರಾಜ್ಯದ ಬೋರ್ಡ್‌ನ 12ನೇ ತರಗತಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು<br>• IGCSE ಬೋರ್ಡ್‌ನ 12ನೇ ತರಗತಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು | | |
| ಹಿಂದಿನ ವರ್ಷದ ಅಂಕಪಟ್ಟಿ | ಯಾವುದೇ 1ನೇ ವರ್ಷದ ಪಿಜಿ ಕೋರ್ಸ್‌ನಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ತಮ್ಮ ಹಿಂದಿನ ಕೋರ್ಸ್ ಅನ್ನು ಕರ್ನಾಟಕದಿಂದ ಹೊರಗಿರುವ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದ್ದರೆ ಮಾತ್ರ (ಹಿಂದಿನ ಕೋರ್ಸ್‌ನ ಎಲ್ಲಾ ಅಂಕಪಟ್ಟಿಗಳನ್ನು ಇ-ದೃಢೀಕರಣಕ್ಕಾಗಿ ಅಪ್‌ಲೋಡ್ ಮಾಡಬೇಕು) | | |

## ಕರ್ನಾಟಕದ ಹೊರಗಿನ ವಿಶ್ವವಿದ್ಯಾನಿಲಯಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಇ-ದೃಢೀಕರಣ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕಾದ ದಾಖಲೆಗಳ ಪಟ್ಟಿ


| ಅಪ್‌ಲೋಡ್ ಮಾಡಬೇಕಾದ ದಾಖಲೆಗಳು | ಅನ್ವಯವಾಗುವ ಕೋರ್ಸ್‌ಗಳು | ಇ-ದೃಢೀಕರಣ ಅಧಿಕಾರಿ | ಅನ್ವಯವಾಗುವ ಇಲಾಖೆಗಳು |
|---|---|---|---|
| ಹಿಂದಿನ ವರ್ಷದ ಅಂಕಪಟ್ಟಿ | ಎಲ್ಲಾ ಕೋರ್ಸ್‌ಗಳು | ಸಂಬಂಧಪಟ್ಟ ಇಲಾಖೆಯ ಜಿಲ್ಲಾ ಅಧಿಕಾರಿ (ಬ್ರಾಹ್ಮಣ ವರ್ಗದ ವಿದ್ಯಾರ್ಥಿಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿಯು ಇ-ದೃಢೀಕರಣ ಮಾಡುತ್ತಾರೆ) | ಸಮಾಜ ಕಲ್ಯಾಣ ಇಲಾಖೆ/ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ / ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ / ಶಿಕ್ಷಣ ಇಲಾಖೆ / ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ |
| ವ್ಯಾಸಂಗ ಪ್ರಮಾಣ ಪತ್ರ | | | |
| ಎಸ್.ಎಸ್.ಎಲ್.ಸಿ/ 10ನೇ ತರಗತಿಯ ಅಂಕಪಟ್ಟಿ | • 2004 ರ ಮೊದಲು SSLC ಉತ್ತೀರ್ಣರಾದ ವಿದ್ಯಾರ್ಥಿಗಳು<br>• ಇತರೆ ರಾಜ್ಯದ ಬೋರ್ಡ್‌ನ 10ನೇ ತರಗತಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು<br>• IGCSE ಬೋರ್ಡ್‌ನ 10ನೇ ತರಗತಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು | | |
| ಪಿ.ಯು.ಸಿ/12ನೇ ತರಗತಿಯ ಅಂಕಪಟ್ಟಿ | • 2010ರ ಮೊದಲು PUC ಉತ್ತೀರ್ಣರಾದ ವಿದ್ಯಾರ್ಥಿಗಳು<br>• ಇತರೆ ರಾಜ್ಯದ ಬೋರ್ಡ್‌ನ 12ನೇ ತರಗತಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು<br>• IGCSE ಬೋರ್ಡ್‌ನ 12ನೇ ತರಗತಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು | | |

| | | | |
|---|---|---|---|
| ಸ್ಟೈಫಂಡ್ ಮತ್ತು ನಾನ್-ಪ್ರಾಕ್ಟೀಸಿಂಗ್ ಪ್ರಮಾಣಪತ್ರ | ಡಿ.ಎಂ / ಎಂ.ಡಿ / ಎಂ.ಡಿ ಹೋಮಿಯೋಪತಿ / ಎಂ.ಡಿ.ಎಸ್ / ಎಂ.ಎಸ್ / ಎಂ.ಎಸ್. (ಮಾಸ್ಟರ್ ಆಫ್ ಸರ್ಜರಿ) / ಎಂ.ಡಿ (ನ್ಯಾಚುರೋಪತಿ ಮತ್ತು ಯೋಗಿಕ್ ಸೈನ್ಸಸ್)/ ಪಿಜಿ ಯುನಾನಿ / ಪಿಜಿ ಡಿಪ್ಲೋಮಾ ಕೋರ್ಸುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು | | ಸಮಾಜ ಕಲ್ಯಾಣ ಇಲಾಖೆ/ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ / ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ |
| ಪೋಷಕರ ವೇತನ ಪ್ರಮಾಣಪತ್ರ | ಡಿಪ್ಲೊಮಾ ಪಾಲಿಟೆಕ್ನಿಕ್ / ಬಿ.ಇ / ಬಿ.ಟೆಕ್ / ಬಿ.ಆರ್ಕ್ / ಎಂ.ಇ /ಎಂ.ಟೆಕ್ / ಎಂ.ಆರ್ಕ್ ಕೋರ್ಸುಗಳಲ್ಲಿ ಅಧ್ಯಯನ ಮಾಡುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಯ ಪೋಷಕರು ವೇತನ ಪಡೆಯುವ ಉದ್ಯೋಗಿಗಳಾಗಿದ್ದು, ಕುಟುಂಬ ವಾರ್ಷಿಕ ಆದಾಯವು 2.5 ಲಕ್ಷದಿಂದ 10 ಲಕ್ಷಗಳ ಒಳಗಡೆ ಇರಬೇಕು | | ತಾಂತ್ರಿಕ ಶಿಕ್ಷಣ ಇಲಾಖೆ |


## 3.1 ಪಿಯುಸಿ ಅಂಕಪಟ್ಟಿಯನ್ನು ಅಪ್‌ಲೋಡ್ ಮಾಡುವ ವಿಧಾನ





"**Select Document Type**" ಡ್ರಾಪ್-ಡೌನ್ ಪಟ್ಟಿಯಿಂದ " **PUC Marks Card**" ಆಯ್ಕೆಯನ್ನು ಆರಿಸಿ




- ನಿಮ್ಮ ಜನ್ಮ ದಿನಾಂಕ, PUC ನೋಂದಣಿ ಸಂಖ್ಯೆ, ಬೋರ್ಡ್ ಹೆಸರು, ಉತ್ತೀರ್ಣರಾದ ವರ್ಷ, ತಂದೆಯ ಹೆಸರು, ತಾಯಿಯ ಹೆಸರು, ಒಟ್ಟು ಅಂಕಗಳು/CGPA, ಪಡೆದ ಅಂಕಗಳು/CGPA ಯನ್ನು ನಮೂದಿಸಿ
- ಸ್ಕ್ಯಾನ್ ಮಾಡಿದ PUC ಅಂಕಪಟ್ಟಿಯನ್ನು ಆಯ್ಕೆ ಮಾಡಲು "**Choose**" ಬಟನ್ ಮೇಲೆ ಕ್ಲಿಕ್ ಮಾಡಿ




- ಸ್ಕ್ಯಾನ್ ಮಾಡಿದ PUC ಅಂಕಪಟ್ಟಿಯನ್ನು ಆಯ್ಕೆ ಮಾಡಿ ಮತ್ತು "**Add Document**" ಬಟನ್ ಅನ್ನು ಕ್ಲಿಕ್ ಮಾಡಿ





- ನೀವು "**View document**" ಐಕಾನ್ ಮೇಲೆ ಕ್ಲಿಕ್ ಮಾಡುವ ಮೂಲಕ ಅಪ್ಲೋಡ್ ಮಾಡಿದ ದಾಖಲೆಯನ್ನು ವೀಕ್ಷಿಸಬಹುದು
- ಇ-ದೃಢೀಕರಣ ಅಧಿಕಾರಿಗೆ ದಾಖಲೆ/ಗಳನ್ನು ಸಲ್ಲಿಸಲು "**Submit All**" ಬಟನ್ ಅನ್ನು ಕ್ಲಿಕ್ ಮಾಡಿ.


**ಸೂಚನೆ:**

- ಸ್ಕ್ಯಾನ್ ಮಾಡಿದ ದಾಖಲೆ PDF ಸ್ವರೂಪದಲ್ಲಿರಬೇಕು ಮತ್ತು ಸ್ಕ್ಯಾನ್ ಮಾಡಿದ ದಾಖಲೆಯ ಗಾತ್ರ 2MB ಗಿಂತ ಕಡಿಮೆ ಇರಬೇಕು.
- "**Delete**" ಐಕಾನ್ ಮೇಲೆ ಕ್ಲಿಕ್ ಮಾಡುವ ಮೂಲಕ ನೀವು ಅಪ್ಲೋಡ್ ಮಾಡಿದ ದಾಖಲೆಯನ್ನು ಅಳಿಸಬಹುದು
- ಮೆಟಾ ಡೇಟಾ (ದೃಢೀಕರಿಸಬೇಕಾದ ಡೇಟಾ) ಮತ್ತು ಅಪ್‌ಲೋಡ್ ಮಾಡಿದ ದಾಖಲೆಯಲ್ಲಿ ಲಭ್ಯವಿರುವ ವಿವರಗಳು ಒಂದೇ ಎಂದು ಖಚಿತಪಡಿಸಿಕೊಳ್ಳುವುದು ಮುಖ್ಯವಾಗಿದೆ. ಇಲ್ಲದಿದ್ದರೆ ಪರಿಶೀಲನೆ ಪ್ರಕ್ರಿಯೆಯಲ್ಲಿ ಇ-ದೃಢೀಕರಣ ಅಧಿಕಾರಿಯಿಂದ ದಾಖಲೆಯನ್ನು ತಿರಸ್ಕರಿಸುವ ಸಾಧ್ಯತೆಯಿದೆ.

## 4. ದೃಢೀಕರಿಸಲು ಬಾಕಿ ಉಳಿದಿರುವ ದಾಖಲೆಗಳು





ವಿದ್ಯಾರ್ಥಿಯು ಅಪ್‌ಲೋಡ್ ಮಾಡಿರುವ ಆದರೆ ಇ-ದೃಢೀಕರಣ ಅಧಿಕಾರಿಯಿಂದ ದೃಢೀಕರಿಸಲು ಬಾಕಿಯಿರುವ ಎಲ್ಲಾ ದಾಖಲೆಗಳನ್ನು "**Pending Documents**" ಮೆನು ಅಡಿಯಲ್ಲಿ ಪ್ರದರ್ಶಿಸಲಾಗುತ್ತದೆ




- ಇ-ದೃಢೀಕರಣ ಅಧಿಕಾರಿಯ ಸಂಪರ್ಕ ವಿವರಗಳನ್ನು ವೀಕ್ಷಿಸಲು "**View Verifier Mobile**" ಲಿಂಕ್ ಅನ್ನು ಕ್ಲಿಕ್ ಮಾಡಿ

**ಸೂಚನೆ:** ನಿಮ್ಮ ದಾಖಲೆಗಳನ್ನು ದೃಢೀಕರಿಸಲು ನೀವು ಸಂಬಂಧಿತ ಮೂಲ ದಾಖಲೆಗಳೊಂದಿಗೆ ಇ-ದೃಢೀಕರಣ ಅಧಿಕಾರಿಯನ್ನು ಭೇಟಿ ಮಾಡಬೇಕು

## 5. ಅನುಮೋದಿತ ದಾಖಲೆಗಳು





ಇ-ದೃಢೀಕರಣ ಅಧಿಕಾರಿಯಿಂದ ಅನುಮೋದಿಸಲಾದ ಮತ್ತು ಇ-ದೃಢೀಕರಿಸಿದ ದಾಖಲೆಗಳ ಪಟ್ಟಿಯನ್ನು ವೀಕ್ಷಿಸಲು "**Approved Documents**" ಮೆನುವಿನ ಮೇಲೆ ಕ್ಲಿಕ್ ಮಾಡಿ

**ಸೂಚನೆ:**


- ನೀವು "**Approved Documents**" ಮೆನು ಅಡಿಯಲ್ಲಿ ಇ-ದೃಢೀಕರಣ ಐಡಿಯನ್ನು ವೀಕ್ಷಿಸಬಹುದು, ಅದನ್ನು ಎಸ್.ಎಸ್.ಪಿ ಪೋರ್ಟಲ್‌ನಲ್ಲಿ ನಮೂದಿಸಬೇಕು
- 2021-2022 ಶೈಕ್ಷಣಿಕ ವರ್ಷದಲ್ಲಿ ಅಪ್‌ಲೋಡ್ ಮಾಡಲಾದ ಮತ್ತು ಅನುಮೋದಿಸಲಾದ ದಾಖಲೆಯ ಇ-ದೃಢೀಕರಣ ಐಡಿಯನ್ನು ಮಾತ್ರ ಎಸ್.ಎಸ್.ಪಿ ಪೋರ್ಟಲ್‌ನಲ್ಲಿ ನಮೂದಿಸಬೇಕು

## 6. ತಿರಸ್ಕರಿಸಿದ ದಾಖಲೆಗಳು




ಇ-ದೃಢೀಕರಣ ಅಧಿಕಾರಿಯಿಂದ ತಿರಸ್ಕರಿಸಲ್ಪಟ್ಟ ದಾಖಲೆಗಳ ಪಟ್ಟಿಯನ್ನು ವೀಕ್ಷಿಸಲು "**Rejected Documents**" ಮೆನುವಿನ ಮೇಲೆ ಕ್ಲಿಕ್ ಮಾಡಿ.

## 7. ಪ್ರೊಫೈಲ್ ಸೈನ್ ಔಟ್




ನಿಮ್ಮ ಖಾತೆಯಿಂದ ಲಾಗ್ ಔಟ್ ಮಾಡಲು "**Sign Out**" ಲಿಂಕ್ ಅನ್ನು ಕ್ಲಿಕ್ ಮಾಡಿ